
# ಮಾಧ್ವವಾಙ್ಮಯಕ್ಕೆ ಶ್ರೀರಾಘವೇಂದ್ರರ ಕೊಡುಗೆ



'ದ್ವೈತವೇದಾಂತದ ಇತಿಹಾಸ ಮತ್ತು ಸಾಹಿತ್ಯ' ಎಂಬ ಮೇರುಕೃತಿಯನ್ನು ಮಾಧ್ವವಾಙ್ಮಯಕ್ಕೆ ನೀಡಿದ ಅಪೂರ್ವ ವ್ಯಕ್ತಿ ಡಾ. ಬಿ.ಎನ್.ಕೆ. ಶರ್ಮರವರು. ಸುಮಾರು ೨೫ ಕ್ಕೂ ಹೆಚ್ಚು ಪ್ರಬಂಧಗಳನ್ನು ರಚಿಸಿ, ೬೦ ರ ದಶಕದಲ್ಲಿಯೇ ಪ್ರಕಟಿಸಿದ ಕೀರ್ತಿ ಇವರದು. ಇವರು ರಚಿಸಿದ ವಿಶ್ವಕೋಶಕ್ಕೆ ಭಾರತ ಸರ್ಕಾರದ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯು ಲಭಿಸಿದೆ. ಪಿಹೆಚ್.ಡಿ., ಡಿ.ಲಿಟ್. ಪದವಿಗಳನ್ನು ಹೊಂದಿ ಮಧ್ವರ ಸಿದ್ಧಾಂತವನ್ನು ದೇಶ-ವಿದೇಶಗಳಲ್ಲಿಯೂ ಪಸರಿಸುವಂತೆ ಮಾಡಿದ ಕೀರ್ತಿ ಇವರದು. ಇವರ 'ಬ್ರಹ್ಮಸೂತ್ರಗಳ ತುಲನಾತ್ಮಕ ಅಧ್ಯಯನ' ಎಂಬ ಕೃತಿಯೊಂದೇ ಸಾಕು, ಬಿ.ಎನ್.ಕೆ. ಶರ್ಮರ ವಿದ್ವತ್ ಗರಿಮೆಯು. ಇವರಿಗೆ ಮಂತ್ರಾಲಯ ಶ್ರೀರಾಘವೇಂದ್ರಸ್ವಾಮಿಗಳವರ ಮಠವು ೨೦೦೬ ರಲ್ಲಿ 'ಶ್ರೀರಾಘವೇಂದ್ರಾನುಗ್ರಹ ಪ್ರಶಸ್ತಿ'- ಯನ್ನಿತ್ತು ಗೌರವಿಸಿದ್ದನ್ನು ಇಲ್ಲಿ ಸ್ಮರಿಸಬಹುದು.

ಮಾಧ್ವಜನಾಂಗದಲ್ಲಿ ನಿತ್ಯಸ್ಮರಣೀಯರಾದ ಮಹಾನುಭಾವರಲ್ಲಿ ಶ್ರೀರಾಘವೇಂದ್ರತೀರ್ಥರೂ ಒಬ್ಬರು. ಶ್ರೀವಿಜಯೀಂದ್ರತೀರ್ಥರ ನಂತರ ಮಧ್ವಸಿದ್ಧಾಂತಕ್ಕೆ ವಿಶಿಷ್ಟ ರೀತಿಯಲ್ಲಿ ವಾಙ್ಮಯಸೇವೆಯನ್ನು ಸಲ್ಲಿಸಿದ ಪ್ರಖ್ಯಾತ ಟಿಪ್ಪಣಿಕಾರರು ಶ್ರೀರಾಘವೇಂದ್ರತೀರ್ಥರು. ಇವರು ಮಧ್ವಪ್ರಮೇಯಗಳನ್ನು ಸುಸ್ಪಷ್ಟಪಡಿಸುವ ಕಲಾಸಂಪನ್ನರು. ಯಾವುದೇ ಮಠಕ್ಕೆ ಸೇರಿದವರಾಗಿರಲೀ, ಪ್ರತಿಯೊಬ್ಬ ಮಾಧ್ವನು ಪ್ರತಿದಿನ ಇವರನ್ನು ಭಕ್ತಿಯಿಂದ ಸ್ಮರಿಸಬೇಕು.

ಶ್ರೀರಾಘವೇಂದ್ರತೀರ್ಥರ ಹೆಚ್ಚು ಗ್ರಂಥಗಳು ಮುನಿತ್ರಯರೆಂದು ಪ್ರಸಿದ್ಧಿ ಪಡೆದಿರುವ ಮಧ್ವ, ಜಯತೀರ್ಥ ಹಾಗೂ ವ್ಯಾಸತೀರ್ಥರ ಗ್ರಂಥಗಳಿಗೆ ಬರೆದ ವ್ಯಾಖ್ಯಾನಗಳಾಗಿವೆ, ಇದಲ್ಲದೆ ಎರಡು ಸ್ವತಂತ್ರ ಕೃತಿಗಳು ಮತ್ತು ಉಪನಿಷತ್ತುಗಳ ಖಂಡಾರ್ಥ ಮತ್ತು ಇತರ ಗ್ರಂಥಗಳ ಮೇಲೆ ಬರೆದ ವ್ಯಾಖ್ಯಾನಗಳೂ ಇವೆ. ಅವರ ಅನೇಕ ಗ್ರಂಥಗಳನ್ನು 'ಭಾವದೀಪ' ಎಂದು ಕರೆದಿದ್ದಾರೆ. ಅವರ ಬರವಣಿಗೆಯೆಂದರೆ ಅತಿ ಸರಳ, ಸ್ಪಷ್ಟ ಮತ್ತು ಅರ್ಥಗರ್ಭಿತ. ಅವರು ಮಧ್ವಸಿದ್ಧಾಂತದ ಪ್ರಮೇಯಗಳನ್ನು ಮನವರಿಕೆ ಮಾಡಿಕೊಡುವಲ್ಲಿ ಅಗ್ರಗಣ್ಯರು, ಎಷ್ಟೋ ಅರ್ಥವಾಗದಂತಹ ಗಂಭೀರವಾದ ರಹಸ್ಯಮಯ ಪ್ರಮೇಯಗಳನ್ನು ದ್ವೈತಮತದ ಸಾಮಾನ್ಯ ಪರಿಚಯವಿರುವವರಿಗೂ ಅರ್ಥವಾಗುವಂತೆ ಸರಳವಾಗಿ ವಿವರಿಸುವ ಅದ್ಭುತ ಕೌಶಲ್ಯದಿಂದಾಗಿಯೇ ಅವರು ಲೋಕದಲ್ಲಿ ಬಹಳ ಖ್ಯಾತಿವಂತರಾಗಿದ್ದಾರೆ. ಮಧ್ವಮತದ ವಾದೇತರ ಗ್ರಂಥಗಳ ಪ್ರಣೇತೃಗಳಾದ ಹಿರಿಯ ವ್ಯಾಖ್ಯಾನಕಾರರಲ್ಲಿ ಕಾಲಗಣನೆಯ ಪ್ರಕಾರ ಕೊನೆಯವರಾಗಿದ್ದರೂ, ಅವರ ಗ್ರಂಥಗಳ ವಿಷಯ ವ್ಯಾಪ್ತವಾದುದು.

ದ್ವೈತವೇದಾಂತ ಅಧಿಕೃತ ತತ್ತ್ವದಾತೃಗಳಾಗಿ ಮುನಿತ್ರಯರೆಂದು ಪ್ರಸಿದ್ಧರಾದ ಮಧ್ವ, ಜಯತೀರ್ಥ, ವ್ಯಾಸತೀರ್ಥರ ಎಲ್ಲ ಪ್ರಮುಖ ಗ್ರಂಥಗಳಿಗೂ ವ್ಯಾಖ್ಯಾನ ಬರೆದಿರುವುದರೊಂದಿಗೆ ಮೂಲ ಆಕರಗ್ರಂಥಗಳ ಮೇಲೂ ಸಹ ಅಂದರೆ, ಋಗ್ವೇದ, ಉಪನಿಷತ್ತುಗಳು, ಗೀತಾ, ಬ್ರಹ್ಮಸೂತ್ರ ಮತ್ತು ಪೂರ್ವಮೀಮಾಂಸಾಸೂತ್ರಗಳಿಗೂ ಟಿಪ್ಪಣಿಗಳನ್ನು ರಚಿಸಿದ್ದಾರೆ. ಆದ್ದರಿಂದಲೇ ಅವರ ಗ್ರಂಥಗಳ ಗಾತ್ರ ಹೆಚ್ಚಿನದು. ಈ ಗ್ರಂಥಗಳ ಅರ್ಥವನ್ನು ವಿವರಿಸುವಾಗ ಅವರು ಇತರ ಶಾಸ್ತ್ರಗಳಲ್ಲಿ ಪಡೆದಿದ್ದ ಪರಿಣತಿ ಮನವರಿಕೆಯಾಗುತ್ತದೆ. ಅವರ ಶೈಲಿ ನೇರ, ಸರಳ. ಎಂತಹ ಶಾಸ್ತ್ರೀಯ ಗಂಭೀರ ಪ್ರಮೇಯಗಳನ್ನಾದರೂ ಸಾಮಾನ್ಯ ವಿದ್ಯಾರ್ಥಿಗೂ ಅರ್ಥವಾಗುವಂತೆ ವಿವರಿಸುವ ಕಲೆ ಅವರಿಗೆ ಕರಗತವಾಗಿತ್ತು. ಶ್ರೀವ್ಯಾಸತೀರ್ಥರ ತರುವಾಯ ವಾದೇತರ ಗ್ರಂಥಕಾರರಲ್ಲಿ ಶ್ರೀರಾಘವೇಂದ್ರತೀರ್ಥರ ಸ್ಥಾನ ಅತ್ಯುಚ್ಚ ಮಟ್ಟದ್ದು, ಸರ್ವಮಾನ್ಯ-ವಾದುದು.

ಶ್ರೀಮದಾಚಾರ್ಯರ ದಶಪ್ರಕರಣಗಳಲ್ಲಿ ಶ್ರೀಜಯತೀರ್ಥರ ಟೀಕೆಗಳಿಗೆ ಶ್ರೀವ್ಯಾಸತೀರ್ಥರು ಮೊದಲೇ ನಾಲ್ಕು ಟಿಪ್ಪಣಿಗಳನ್ನು ನೀಡಿದ್ದ ಕಾರಣ, ಅವುಗಳನ್ನು ಬಿಟ್ಟು ಉಳಿದ ಆರಕ್ಕೆ ಶ್ರೀರಾಘವೇಂದ್ರತೀರ್ಥರು ಟಿಪ್ಪಣಿಯನ್ನು ಬರೆದಿದ್ದಾರೆ. ಕರ್ಮನಿರ್ಣಯ ಟಿಪ್ಪಣಿ ಹೊರತು ಮಿಕ್ಕ ಐದು ಟಿಪ್ಪಣಿಗಳು ಪ್ರಕಟವಾಗಿವೆ. ವಿಷ್ಣುತತ್ತ್ವನಿರ್ಣಯದ ಟೀಕಾಟಿಪ್ಪಣಿ ಅತೀ ದೊಡ್ಡದು. ೩,೭೦೦ ಗ್ರಂಥಗಳಷ್ಟಿದೆ (೩೨ ಅಕ್ಷರಗಳಿಗೆ ಒಂದು ಗ್ರಂಥ). ಶ್ರೀರಾಘವೇಂದ್ರತೀರ್ಥರ ಟಿಪ್ಪಣಿಗಳು ಜಿಜ್ಞಾಸು-ಗಳ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ವಿಶಿಷ್ಟ ಹಾಗೂ ಕ್ಲಿಷ್ಟ ಭಾಗಗಳನ್ನು ಸುಸ್ಪಷ್ಟಪಡಿಸುತ್ತವೆ. ಇದಕ್ಕೆ ಒಂದು ಉದಾಹರಣೆ, ತತ್ತ್ವೋದ್ಯೋತ ಟೀಕಾದಲ್ಲಿ ಶ್ರೀಜಯತೀರ್ಥರು ಗಂಭೀರವಾಗಿ 'ಆಧಾರಾಧೇಯಭಾವಾಭಾವಾತ್' ಎಂಬುದನ್ನು ಕುರಿತು ನೀಡಿರುವ ವಿವರಣೆ ಅದು ಅದ್ವೈತ ದಾರ್ಶನಿಕರು 'ತದಾ: ರ' ಎಂಬುದನ್ನು ವಿವರಿಸುವಾಗ ವೇದಾಂತ ಶಾಸ್ತ್ರದ ಅಧ್ಯಯನದ ಫಲವಾಗಿ ಅಜ್ಞಾನ ನಿವೃತ್ತಿ ಪಡೆದು, ಆತ್ಮನು ತದ್ವಿಷಯವಾಗದೆ, ತದಾತ್ಮನಾ ಪರಿಣತಿಯನ್ನು ಪಡೆಯುವನೆಂಬುದಕ್ಕಿರುವ ಮೂರು ವಿಕಲ್ಪಗಳಲ್ಲಿ ಒಂದನ್ನು ಕುರಿತು ಹೇಳುವ ಸಂದರ್ಭಕ್ಕೆ ಅನ್ವಯಿಸುತ್ತದೆ. ಅದ್ವೈತಿಗಳು ಜಗತ್ತಿನ ಮಿಥ್ಯಾತ್ವಸಾಧಕವಾಗಿ ಹೇಳುವ 'ದೃಶ್ಯತ್ವಂ' ಎಂಬುದನ್ನು ಶ್ರೀಮಧ್ವಾಚಾರ್ಯರು ಖಂಡಿಸುತ್ತಾ ಅದು, 'ಅನೈಕಾಂತಿಕ'ದಲ್ಲಿ ಪರ್ಯವಸಾನ-ವಾಗುವುದೆಂದಿರುವುದರ ಮೇಲೆ ವಿಚಾರ ಆರಂಭವಾಗಿದೆ. ಏಕೆಂದರೆ, ಆತ್ಮನಿಗೂ ಆ ವಾದ ಅನ್ವಯಿಸುತ್ತದೆ. ಹೇಗೆಂದರೆ, ಆತ್ಮನ ಬಗ್ಗೆ ಇರುವ ಅನ್ಯಥಾ ಜ್ಞಾನವನ್ನು

ಹೋಗಲಾಡಿಸಿ ವೇದಾಂತವು ಆತ್ಮನ ಜ್ಞಾನವನ್ನುಂಟುಮಾಡಬೇಕು. ಅಂದರೆ, ಆತ್ಮನು ಜ್ಞಾನಕ್ಕೆ ವಿಷಯನಾದಂತಾಯಿತು. ಶ್ರೀಜಯತೀರ್ಥರು ಈ ವಿಷಯವನ್ನು ವಿಶ್ಲೇಷಿಸುತ್ತಾ 'ತದಾಕಾರತ್ವ' ಎಂಬ ಮನಃ ಪರಿಣಾಮರೂಪವನ್ನು ಮೂರೇ ಮೂರು ಬಗೆಯಲ್ಲಿ ಹೇಳಲು ಸಾಧ್ಯ. ಅದರಲ್ಲಿ ಕೊನೆಯದನ್ನು 'ಸ ಆಕಾರೊ ಯಸ್ಯ' ಎಂದು ಪರಿಭಾಷಿಸಬೇಕಾಗುವುದು ಎಂದು ತೋರಿಸಿದ್ದಾರೆ. ಅಲ್ಲದೆ, ಮೊದಲೆರಡು ವಿಕಲ್ಪಗಳಲ್ಲಿ ಬರುವ ತೊಡಕನ್ನು ವಿವರಿಸಿ, ಮೂರನೆಯ ವಿಕಲ್ಪವೂ ಕೂಡ ಅಸಮರ್ಥನೀಯವೆಂದು ಹೇಳಿರುವರು. ಮನೋವೃತ್ತಿಯ ತದಾಕಾರತ್ವವನ್ನು ಸಮರ್ಥಿಸಲು ಕನಿಷ್ಠ ಪಕ್ಷ 'ಆಧಾರಾಧೇಯಭಾವ' ಸಂಬಂಧ ಆತ್ಮನಿಗೂ ಆಕಾರಕ್ಕೂ ಇರಬೇಕು. ಶ್ರೀಜಯತೀರ್ಥರ ಈ ಖಂಡನೆಯ ತಾತ್ಪರ್ಯವನ್ನು ಶ್ರೀಶ್ರೀನಿವಾಸತೀರ್ಥರಾಗಲೀ, ಶ್ರೀವೇದೇಶತೀರ್ಥರಾಗಲೀ ವಿವರಿಸುವ ಗೋಜಿಗೆ ಹೋಗಲಿಲ್ಲ. **ಶ್ರೀರಾಘವೇಂದ್ರತೀರ್ಥರು ಆ ಸಮಸ್ಯೆಯನ್ನು ಎಳೆ ಎಳೆಯಾಗಿ ಬಿಡಿಸಿ ವಿಶ್ಲೇಷಿಸಿದ್ದಾರೆ –**

ಸಾಮಾನ್ಯವಾಗಿ ಆಕಾರಕ್ಕೆ ಆಧಾರ ಎಂದರೆ 'ಆಕಾರ ವಾನ್' ಎಂದರ್ಥ. ಅಂದರೆ ವೃತ್ತಿವಾನ್ ಎಂದಂತಾಯಿತು. 'ವೃತ್ತಿ'ಗೆ ಆಕಾರಿನ್ ಆಧಾರ, ಆತ್ಮನ್ ಆಧೇಯ ಆದಂತಾಯಿತು. ಇದು ಅಸಾಧ್ಯ. ಏಕೆಂದರೆ ಅದ್ವೈತಿಗಳ ಪ್ರಕಾರ ಆತ್ಮ ಅಪರಿಚ್ಛಿನ್ನ ಆದ್ದರಿಂದ ಅದನ್ನು ವೃತ್ತಿ ಎಂಬ 'ಆಕಾರಿನ್' ಆಗಿ ಸೆರೆಹಿಡಿಯುವುದು ಹೇಗೆ ? ಏಕೆಂದರೆ ಅದು ಪರಿಚ್ಛಿನ್ನ ಆಕಾರಿನ್ ಮತ್ತು ಆಕಾರಗಳಲ್ಲಿ ಆಧಾರಾಧೇಯ ಭಾವ ಸಂಬಂಧವನ್ನು ಹೇಳುವುದೆಂದರೆ ಆತ್ಮನಿಗೂ ಮನೋವೃತ್ತಿಗೂ ಆ ಸಂಬಂಧವನ್ನು ಹೇಳಬೇಕು. ಹಾಗೆ ಹೇಳುವುದು ಸರ್ವಾತ್ಮನಾ ಅಸಾಧ್ಯ. ಹೀಗೆ ಶ್ರೀಜಯತೀರ್ಥರ ಭಾವವನ್ನು ಶ್ರೀರಾಘವೇಂದ್ರತೀರ್ಥರು ವಿವರಿಸಿ ಸ್ಪಷ್ಟಪಡಿಸಿರುತ್ತಾರೆ. (ಈ ವಿಷಯದಲ್ಲಿ ಹೆಚ್ಚಿನ ಮಾಹಿತಿಗಾಗಿ ಶ್ರೀರಾಘವೇಂದ್ರತೀರ್ಥರ ತತ್ತ್ವೋದ್ಯೋತ ಟೀಕಾ-ಟಿಪ್ಪಣಿಯನ್ನು ನೋಡಬಹುದಾಗಿದೆ.)

ಶ್ರೀರಾಘವೇಂದ್ರತೀರ್ಥರ ಉಳಿದ ಗ್ರಂಥಗಳೆಲ್ಲಾ ಒಂದು ತೂಕವಾದರೆ, ಅವರು ರಚಿಸಿದ ಅಪೂರ್ವ ಕೃತಿ 'ಭಾಟ್ಟಸಂಗ್ರಹ'ದ ತೂಕವೇ ಒಂದು. ಸಮಗ್ರ ಜೈಮಿ ಸೂತ್ರಗಳಿಗೆ ವಿಸ್ತೃತವ್ಯಾಖ್ಯೆ. ಈ ಟಿಪ್ಪಣಿ ಅತ್ಯುಪಯುಕ್ತವಾದುದು. ಮೂಲದ ಭಾವವನ್ನರಿಯಲು ಮಾತ್ರವಲ್ಲ, 'ಮಣಿ' ಮತ್ತು ಅದರ ವ್ಯಾಖ್ಯಾನಗಳ ಯಾವ ಅಂಶವನ್ನು ಶ್ರೀವ್ಯಾಸತೀರ್ಥರು ತಮ್ಮ ಗ್ರಂಥದಲ್ಲಿ ಉಲ್ಲೇಖಿಸಿರುವರೋ ಅದರ ಭಾವವನ್ನು ಅರಿಯಲು ಅತ್ಯಗತ್ಯವಾಗಿದೆ. ಸ್ಪಷ್ಟತೆ ಶ್ರೀರಾಘವೇಂದ್ರರ ಶೈಲಿಯ ವೈಶಿಷ್ಟ್ಯ, ಈ ವೈಶಿಷ್ಟ್ಯವನ್ನು ಗ್ರಂಥಕರ್ತೃಗಳಾದ ರುಚಿದತ್ತ ಮತ್ತು ನರಹರಿ ತಮ್ಮ

ಗ್ರಂಥಗಳಲ್ಲಿ ಉಲ್ಲೇಖಿಸಿದ್ದಾರೆ. ಈ ಗ್ರಂಥದಲ್ಲಿ ಅತ್ಯಂತ ಜಟಿಲವಾದ ತಾರ್ಕಿಕ ಪ್ರಮೇಯಗಳನ್ನು ಅತಿ ಸುಲಭವಾಗಿ ಸುಬೋಧ್ಯವಾಗುವಂತೆ ವಿವರಿಸಿದ್ದಾರೆ.

'ಭಾಟ್ಟಸಂಗ್ರಹ'ವು ಅದ್ಭುತ ಗ್ರಂಥ. ಅಪೂರ್ವವಾದುದೂ ಹೌದು. ತನ್ನ ಸತ್ವದ ಕಾರಣದಿಂದಷ್ಟೇ ಅಲ್ಲ, ಒಬ್ಬ ಮಾಧ್ವಪೀಠಾಧಿಪತಿಯು ತನ್ನ ಸಂಪ್ರದಾಯಕ್ಕೆ ಹೊರತಾದ ಮತಗ್ರಂಥದ ವ್ಯಾಖ್ಯಾನವೆಂಬ ಕಾರಣದಿಂದ ಇದು ಗಮನಾರ್ಹವಾದುದು. ಪ್ರತಿ ಅಧಿಕರಣದ ಕೊನೆಯಲ್ಲಿ ಪೂರ್ವಪಕ್ಷ ಮತ್ತು ಸಿದ್ಧಾಂತದ ತಿರುಳನ್ನು ಕೊಡಲಾಗಿದೆ. ಗ್ರಂಥಕಾರರ ಸರ್ವೋತ್ಕೃಷ್ಟ ಶೈಲಿಗೆ ಇದೊಂದು ಉದಾಹರಣೆ, ಇದರಲ್ಲಿ ಶಾಬರಭಾಷ್ಯ, ಕುಮಾರಿಲರ ಉದ್ಗ್ರಂಥಾದಿಗಳ ಸೂಕ್ಷ್ಮ ನಿರೀಕ್ಷೆಯು ಬಂದಿದೆ.

ತಾತ್ಪರ್ಯಚಂದ್ರಿಕಾದಲ್ಲಿ ಮೊಟ್ಟಮೊದಲಿಗೆ ಶ್ರೀವ್ಯಾಸತೀರ್ಥರು ಪೂರ್ವಮೀಮಾಂಸಾ ನ್ಯಾಯಗಳನ್ನು ಮಧ್ವಭಾಷ್ಯದ ಪ್ರಮೇಯಗಳ ಪುಷ್ಟೀಕರಣಕ್ಕಾಗಿ ಬಳಸಿಕೊಂಡರು. ಅವರ ಶಿಷ್ಯರು ಶ್ರೀವಿಜಯೀಂದ್ರರು ಪ್ರತ್ಯೇಕ ಗ್ರಂಥವನ್ನು ಬರೆದು ಅಂಥ ನ್ಯಾಯಗಳನ್ನೆಲ್ಲಾ ವಿವರಿಸಿದರು. ಮಾಧ್ವರ ಹಿತದೃಷ್ಟಿಯಿಂದ ಮೀಮಾಂಸಾಶಾಸ್ತ್ರದ ಪ್ರಮುಖ ಹಾಗೂ ಸಾಮಾನ್ಯ ನ್ಯಾಯಗಳನ್ನು ವಿವರಿಸಿ ಬೇರೊಂದು ಗ್ರಂಥವನ್ನೇ ಅವರು ರಚಿಸಿದರು. ಮಾಧ್ವರು ಅದಕ್ಕೆ ಮುಂಚೆ ಪೂರ್ವಮೀಮಾಂಸಾಶಾಸ್ತ್ರಕ್ಕೆ ಗಮನಕೊಡುತ್ತಿರಲಿಲ್ಲವೆಂದರೂ ತಪ್ಪಿಲ್ಲ. ಮಧ್ವಭಾಷ್ಯದಲ್ಲಿ ಪೂರ್ವಪಕ್ಷ ಸಿದ್ಧಾಂತಗಳ ಬಗ್ಗೆ ಪೂರ್ಣವ್ಯುತ್ಪತ್ತಿಯನ್ನು ಪಡೆಯಬಯಸುವವರಿಗೆ ಪೂರ್ವಮೀಮಾಂಸಾ ನ್ಯಾಯಗಳ ಜ್ಞಾನ ಅತ್ಯಗತ್ಯವೆಂಬುದನ್ನು ಶ್ರೀವ್ಯಾಸತೀರ್ಥರು ಮೊದಲಿಗೆ ತಾತ್ಪರ್ಯಚಂದ್ರಿಕಾ ಮುಂತಾದ ತಮ್ಮ ಕೃತಿಗಳಿಂದ ತೋರಿಸಿಕೊಟ್ಟರು. ಇತರ ಮತಗಳವರು ಪೂರ್ವಮೀಮಾಂಸಾಶಾಸ್ತ್ರದ ಕೋವಿದರಾಗಿರುವಾಗ ವಾದರಂಗಕ್ಕಿಳಿಯುವುದಕ್ಕೆ ಮುನ್ನ ಮಾಧ್ವವಿದ್ವಾಂಸರುಗಳೂ ಸಹ ಆ ಶಾಸ್ತ್ರದ ಪರಿಣತಿಯನ್ನು ಪಡೆದಿರಬೇಕಾದ್ದು ಆವಶ್ಯಕವಾಗಿತ್ತು. ಇದಕ್ಕಾಗಿ ಪೂರ್ವಮೀಮಾಂಸಾ ಸೂತ್ರಗಳು, ಟೀಕಾಗಳು, ವಾರ್ತಿಕಗಳು ಎಲ್ಲವನ್ನೂ ಕರತಲಾಮಲಕ ಮಾಡಿಕೊಂಡ ಸೂರಿಗಳೊಬ್ಬರು ಒಂದು ಸ್ಪಷ್ಟವಾದ ಮೀಮಾಂಸಾ ನ್ಯಾಯಗಳನ್ನು ವಿವರಿಸುವ ಗ್ರಂಥವನ್ನು ರಚಿಸಿಕೊಡಬೇಕಿತ್ತು. ಆ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸಿ ಮಹದುಪಕಾರ ಮಾಡಿರುವವರು ಶ್ರೀರಾಘವೇಂದ್ರರು. ವೇದೋಕ್ತ ಕರ್ಮಕಾಂಡದಲ್ಲಿಯೂ, ಪೂರ್ವಮೀಮಾಂಸಾ ಸೂತ್ರಗಳಲ್ಲಿಯೂ ಅವರ ಪರಿಣತಿ ಉತ್ತಮ ಮಟ್ಟದ್ದಾಗಿತ್ತು. ಅವರು ತಮ್ಮ ಬಾಲ್ಯದಲ್ಲಿ ತಮಿಳುನಾಡಿನಲ್ಲಿ ಹೆಸರಾಂತ ಮಧುರೆ, ಕುಂಭಕೋಣ ಮುಂತಾದ ವಿದ್ವಾಂಸರೂ ಕರ್ಮಠರೂ ಇದ್ದ ಸ್ಥಳಗಳಲ್ಲಿದ್ದು ವಿದ್ಯಾಭ್ಯಾಸಂಗ ಮಾಡಿದ್ದು ಸಾರ್ಥಕವಾಯಿತು. ೧೬ ಮತ್ತು ೧೭ ನೇ ಶತಮಾನಗಳಲ್ಲಿ ಆ ಸ್ಥಳಗಳು ಷಟ್‌ಶಾಸ್ತ್ರ-

ಗಳ ಅಧ್ಯಯನಕ್ಕೆ ಪ್ರಖ್ಯಾತವಾಗಿದ್ದವು. ಶ್ರೀಜಯತೀರ್ಥರು ಬ್ರಹ್ಮಸೂತ್ರಭಾಷ್ಯಕ್ಕೆ ಟೀಕಾ ಬರೆಯುವಾಗ ಅನುಸರಿಸಿರುವ ಕ್ರಮವನ್ನು ಆದರ್ಶವಾಗಿಟ್ಟುಕೊಂಡು ಭಾಟ್ಟಸಂಗ್ರಹದಲ್ಲಿ ಅಧಿಕರಣಗಳು ಹಾಗೂ ತದ್ಗತ ಸೂತ್ರಗಳ ಹಾರ್ದವನ್ನು ಸ್ಪಷ್ಟಪಡಿಸುತ್ತಾ ಹೋಗಿದ್ದಾರೆ. ಶಬ್ದಾಡಂಬರವನ್ನು ವರ್ಜಿಸಿ ವಿಷಯಾಂತರ-ವಾಗದಂತೆ ನೇರವಾಗಿ, ಸ್ಪಷ್ಟವಾಗಿ, ಸಂಗ್ರಹವಾಗಿ ಅಧಿಕರಣಗಳ ತಾತ್ಪರ್ಯವನ್ನು ಹೇಳಿ, ಸೂತ್ರಗಳ ಅರ್ಥವನ್ನು ಸಂಗತಿ, ವಿಷಯ, ಸಂದೇಹ, ಪೂರ್ವಪಕ್ಷ, ಪರೀಕ್ಷಾ ಮತ್ತು ಸಿದ್ಧಾಂತಾದಿ ಅವಯವಗಳ ವ್ಯವಸ್ಥಿತವಾದ ನಿರೂಪಣೆ ಮಾಡಿದ್ದಾರೆ. ಈ ಗ್ರಂಥವು ಶ್ರೀರಾಘವೇಂದ್ರರಷ್ಟೇ ಸರಳ, ಪ್ರಾಮಾಣಿಕ ಮತ್ತು ಅಸಂದಿಗ್ಧವಾಗಿರು-ವುದರಿಂದ ಮೀಮಾಂಸಾಶಾಸ್ತ್ರಕೋವಿದರೂ ಸಹ ಇದರ ಪಾಠಪ್ರವಚನದಿಂದ ಲಾಭ ಪಡೆಯಬಹುದು. ಎಲ್ಲರಿಗೂ ಇದು ಮಾರ್ಗದರ್ಶಕವೂ, ಬೋಧ್ಯವೂ ಆಗಿದೆ.